**(ದಿನಾಂಕಃ 27.08.2024** ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು**)**

**ಪಾಟೀ ಸವಾಲುಃ ಪ್ರತಿವಾದಿ *1* ರವರ ಪರ ವಕೀಲರಾದ ಶ್ರೀ ವಿ. ಎಸ್. ಕೆ ರವರಿಂದ ಃ-**

1. ನಮ್ಮ ತಂದೆಯ ಹೆಸರು ಲಿಂಗಪ್ಪ. ನನ್ನ ತಾಯಿಯ ಹೆಸರು ಪದ್ಮಾವತಮ್ಮ. ನಮ್ಮ ತಂದೆ ತಾಯಿಗೆ ನನ್ನನ್ನು ಸೇರಿಸಿ ಒಟ್ಟು 5 ಜನ ಮಕ್ಕಳು ಇರುತ್ತಾರೆ ಎಂದರೆ ಸರಿಯಲ್ಲ ಸಾಕ್ಷಿಯು ಮುಂದುವರಿದು 4 ಜನ ಮಕ್ಕಳು ಎಂದು ನುಡಿಯುತ್ತಾರೆ.

2. 1991 ರಲ್ಲಿ ನನ್ನ ಹಿರಿಯ ಸಹೋದರ ಮಂಜುನಾಥ್ ರವರು ಮರಣ ಹೊಂದಿರುತ್ತಾರೆ. ಸಾಕ್ಷಿಯು ಮುಂದುವರಿದು ಅವರ ವಿವಾಹ ಆಗಿರುವುದಿಲ್ಲ ಎಂದು ನುಡಿಯುತ್ತಾರೆ.

3. ದಾವಾ ಎ ಶೆಡ್ಯೂಲ್ ಆಸ್ತಿಯಲ್ಲಿ 1 ಎಕರೆ 06 ಗುಂಟೆ ಪ್ರತಿವಾದಿ 1 ರವರು ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ಜಂಟಿ ಸ್ವಾಧೀನದಲ್ಲಿ ಇರುತ್ತೇವೆ ಎಂದು ನುಡಿಯುತ್ತಾರೆ.

4. ನನ್ನ ಸಹೋದರನಾದ ಎನ್ ದೇವೆಂದ್ರ ರವರನ್ನು ಈ ಪ್ರಕರಣದಲ್ಲಿ ಪಕ್ಷಗಾರನ್ನಾಗಿ ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಆತನು ನನ್ನ ಸ್ವಂತ ಸಹೋದರನಾಗಿರುವುದಿಲ್ಲ ಚಿಕ್ಕಪ್ಪನ ಸಹೋದರ ಆಗಿರುತ್ತಾನೆ ಎಂದು ನುಡಿಯುತ್ತಾರೆ.

5. ನನ್ನ ಚಿಕ್ಕಪ್ಪನ ಹೆಸರು ನಾಗರಾಜ ಆಗಿರುತ್ತದೆ. ಸದರಿ ದೇವೆಂದ್ರ ರವರು ರಿಪ್ಪನ್ ಪೇಟೆಯಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿಯಲ್ಲ.

6. ದೇವೆಂದ್ರ ರವರು ರಿಪ್ಪನ್ ಪೇಟೆಯಲ್ಲಿ 1 ನೇ ತರಗತಿ ಇಂದ ಪಿ.ಯು.ಸಿ ವರೆಗೆ ವಿದ್ಯಾಬ್ಯಾಸ ಮಾಡಿರುತ್ತಾರೆ ಎಂದರೆ ಸರಿ. ನನ್ನ ತಂದೆ ಮೂರು ಜನ ಸಹೋದರರು ಇರುತ್ತಾರೆ. ನಮ್ಮ ತಂದೆ ಹಿರಿಯ ಮಗನಾಗಿರುತ್ತಾರೆ.

7. ನಮ್ಮ ಶಾಲೆಯ ಪ್ರವೇಶವನ್ನು ಶಾರದ ತಂದೆ ಲಿಂಗಪ್ಪ ಎಂದು ದಾಖಲಿಸಿರುತ್ತಾರೆ ಎಂದರೆ ಸರಿ. ಪ್ರತಿವಾದಿ ಗಳ ಶಾಲಾ ದಾಖಲಾತಿಗಳಲ್ಲಿ ನಮ್ಮ ತಂದೆಯ ಹೆಸರು ಲಿಂಗಪ್ಪ ಎಂದು ತೋರಿಸಿ ದಾಖಲಿಸಿರುತ್ತೇವೆ ಎಂದರೆ ಸರಿ.

8. ನಾವು ಕುರುಬ ಜಾತಿಗೆ ಸೇರಿರುತ್ತೇವೆ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿ ಅದು ಎನ್ ದೇವೇಂದ್ರ ರವರ ಶಾಲಾ ಪ್ರಮಾಣ ಪತ್ರವಾಗಿದ್ದು ಅದರಲ್ಲಿ ತಂದೆಯ ಹೆಸರು ಲಿಂಗಪ್ಪ ಎಂದು ನಮೂದಿಸಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ನಿಂಗಪ್ಪ ಎಂದು ನಮೂದಿಸಿರುತ್ತಾರೆ ಎಂದು ನುಡಿಯುತ್ತಾರೆ.

9. ಎನ್ ದೇವೆಂದ್ರ ರವರು 1985-86 ರಿಂದ 1988-89 ರ ವರೆಗೆ ತನ್ನ 8 ರಿಂದ 10 ನೇ ತರಗತಿಯನ್ನು ಸರ್ಕಾರಿ ಪೌಡ ಶಾಲೆಯಲ್ಲಿ ರಿಪ್ಪನ್ ಪೇಟೆಯಲ್ಲಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಅದು ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

10. 1990 ರಲ್ಲಿ ಎನ್ ದೇವೇಂದ್ರ ರವರು ಜೆ.ಒ.ಸಿ ಕೊರ್ಸ ಅನ್ನು ಪಡೆದು ಸದರಿ ಕೊರ್ಸ್ ನ ದಾಖಲೆಯಲ್ಲಿ ಆತನ ತಂದೆಯ ಹೆಸರು ನಿಂಗಪ್ಪ ಎಂದು ಮತ್ತು ಜಾತಿ ಕುರುಬರು ಎಂದು ನಮೂದಿಸಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

11. ದಿನಾಂಕಃ 10.05.1971 ರಲ್ಲಿ ನಮ್ಮ ತಂದೆ ತಾಯಿಗೆ ಎನ್ ದೇವೆಂದ್ರ ರವರು ಕೊನೆಯ ಮಗನಾಗಿ ಜನಿಸಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

12. ಎನ್ ದೇವೆಂದ್ರ ರವರು ತನ್ನ ಪದವಿ ಪೂರ್ವ ಶಿಕ್ಷಣದ ದಾಖಲೆಗಳಲ್ಲಿ ತನ್ನ ತಂದೆ ತಾಯಿಗಳ ಹೆಸರು ನಿಂಗಪ್ಪ ಮತ್ತು ಪದ್ಮಾವತಮ್ಮ ಎಂದು ದಾಖಲಿಸಿ ಸದರಿಯವರು ದಿನಾಂಕಃ 10.05.1971 ರಂದು ಜನಿಸಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ದಾಹಲೆಯಲ್ಲಿ ಎನ್ ದೇವೆಂದ್ರ ರವರಿಗೆ ಇಬ್ಬರು ಸಹೋದರ ಮತ್ತು ಇಬ್ಬರು ಸಹೋದರ ಇರುತ್ತಾರೆ ಎಂದು ಉಲ್ಲೇಖ ಇರುತ್ತದೆ ಎಂದರೆ ಸಾಕ್ಷಿಯು ನನಗೆ ಅದು ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

13. ಎನ್ ದೇವೆಂದ್ರ ರವರ ಹೆಂಡತಿಯ ಹೆಸರು ರತ್ನಾವತಿ ಇರುತ್ತದೆ. ಅವರ ವಿವಾಹ ಯಾವ ವರ್ಷದಂದು ಆಗಿರುತ್ತದೆ ಎಂದು ನನಗೆ ಹೇಳಲು ಬರುವುದಿಲ್ಲ.

14. ಎನ್ ದೇವೆಂದ್ರ ರವರ ಮದುವೆ ಪತ್ರವನ್ನು ತೋರಿಸಿ ಸಾಕ್ಷಿಯು ಅದನ್ನು ನೋಡಿ ಹೌದು ಎಂದು ಗುರುತಿಸಿರುತ್ತಾರೆ. ಸದರಿ ಆಮಂತ್ರಣ ಷತ್ರಿಕೆಯನ್ನು ನಿಡಿ1 ಎಂದು ಗುರುತಿಸಲಾಯಿತು. ಸಾಕ್ಷಿಯು ಮುಂದುವರಿದು ಅದು ನನ್ನ ಚಿಕ್ಕಪ್ಪನ ಮಗನ ಮದುವೆಯ ಆಮಂತ್ರಣ ಪತ್ರಿಕೆ ಆಗಿರುತ್ತದೆ ಎಂದು ನುಡಿಯುತ್ತಾರೆ.

15. ಸದರಿ ನಿಡಿ1 ರಲ್ಲಿ ಎನ್ ದೇವೆಂದ್ರ ರವರ ತಂದೆ ಹೆಸರು ಲಿಂಗಪ್ಪ ಮತ್ತು ಅವರ ತಾಯಿಯ ಹೆಸರು ಪದ್ಮಾವತಮ್ಮ ಎಂದು ನಮೂದಿಸಿರುತ್ತಾರೆ ಎಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

16. ಸದರಿ ಎನ್ ದೇವೆಂದ್ರ ರವರು ವಿವಾಹ ಮಾಡಿಕೊಂಡು ಬೆಂಗಳೂರಿನಲ್ಲಿ ಸರ್ಕಾರಿ ಕೆಲಸದಲ್ಲಿ ಚಾಲಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ ಎಂದರೆ ಸರಿ.

17. ದಿನಾಂಕಃ 24.01.2000 ಸಾಲಿನಲ್ಲಿ ನಮ್ಮ ಮತ್ತು ಪ್ರತಿವಾದಿ 1 ಮತ್ತು ಪ್ರತಿವಾದಿ 2 ಮತ್ತು ದೇವೇಂದ್ರ ಮತ್ತು ನಮ್ಮ ತಾಯಿಯ ಮಧ್ಯ ಜಬಾನಿ ಹಿಸ್ಸೆ ಆಗಿರುತ್ತದೆ ಎಂದರೆ ಸರಿಯಲ್ಲ.

18. ದಿನಾಂಕಃ 24.01.2000 ರಂದು ಜುಬಾನೆ ಹಿಸ್ಸೆಯಲ್ಲಿ ಪ್ರತಿವಾದಿ 1 ಮತ್ತು ಎನ್ ದೇವೆಂದ್ರ ವರಿಗೆ ದಾವಾ ಎ ಶೆಡ್ಯೂಲ್ ಸ್ವತ್ತನ್ನು ಸಮಾನವಾಗಿ ವಿಂಗಡಿಸಿರುತ್ತಾರೆ ಎಂದರೆ ಆಗಿರಬಹುದು ನಮ್ಮ ತಾಯಿಯನ್ನು ಹೊರಹಾಕಿ ನಮ್ಮ ಕಡೆ ಕಳುಹಿಸಿರುತ್ತಾರೆ ಎಂದು ನುಡಿಯುತ್ತಾರೆ. ನಂತರ ಹಿಸ್ಸಾ ಆಗಿರುವುದಿಲ್ಲ ಎಂದು ನುಡಿಯುತ್ತಾರೆ.

19. ದಾವಾ ಬಿ ಶೆಡ್ಯೂಲ್ ಸ್ವತ್ತಿನ ವಿಸ್ತೀರ್ಣ 60 ಇಂಟು 182 ಇರುತ್ತದೆ. ದಾವಾ ಬಿ ಶೆಡ್ಯೂಲ್ ಸ್ವತ್ತಿನಲ್ಲಿ ನನಗೆ 182 ಇಂಟು 10 ಅಡಿ ಮತ್ತು ಪ್ರತಿವಾದಿ 2 ರವರಿಗೆ 100 ಇಂಟು 20 ಮತ್ತು 82 ಇಂಟು 10 ಮಳಿಗೆಯನ್ನು ಹಂಚಿರುತ್ತಾರೆ ಎಂದರೆ ಸರಿಯಲ್ಲ.

20. ಸದರಿ ಜುಬಾನೆ ಹಿಸ್ಸೆಯಲ್ಲಿ ಪ್ರತಿವಾದಿ 1 ರವರಿಗೆ 182 ಇಂಟು 20 ಅನ್ನು ವಾಸದ ಮನೆಯನ್ನು ಹಂಚಿರುತ್ತಾರೆ ಎಂದರೆ ಹಂಚಿಕೊಂಡಿರುತ್ತಾರೆ ವಿನಃ ಹಿಸ್ಸಾ ಆಗಿರುವುದಿಲ್ಲ ಎಂದು ನುಡಿಯುತ್ತಾರೆ.

21. ದೇವೇಂದ್ರ ರವರಿಗೆ 182 ಇಂಟು 10 ಅನ್ನು ವಾಸದ ಮನೆಯನ್ನು ಹಂಚಿರುತ್ತಾರೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಪ್ರತಿವಾದಿ 1 ರವರ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೊರಿದ್ದು ಸಮಯಾವಕಾಶ ನೀಡಿ ಮುಂದೂಡಲಾಯಿತು.)

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸ. ಎಂ. ಒ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಹೊಸನಗರ.